

ಕೆಲಸ ಆಗುತ್ತದೆ. ವ್ಯಾಯಾಮದ ಜೊತೆಗೆ ಮೈಕೈ ಹಗುರವಾಗುತ್ತದೆ. ದಿನವೂ ಹೊಸ ಹೂಗಳು ಅರಳಿದಾಗ ಸಂತೋಷವಾಗುತ್ತದೆ. ಮಳೆಗಾಲದಲ್ಲಿ ಕೆಲವು ಹೂವಿನಗಿಡಗಳು ಕೊಳೆತುಹೋಗುತ್ತವೆ. ಹೊಸ ಗಿಡಗಳನ್ನ ತಂದು ಊರುತ್ತೇನೆ. ಪರಿಚಿತರು, ಸ್ನೇಹಿತರು ಹಳೆ ವಿದ್ಯಾರ್ಥಿಗಳು ಗಿಡ ತೆಗೆದುಕೊಳ್ಳಲು ಬರುತ್ತಾರೆ. ಕೆಲವರು ತಂದುಕೊಡುತ್ತಾರೆ.

ಪ್ರತಿದಿನ ಬೆಳಿಗ್ಗೆ ಕಾಫಿಯ ನಂತರ ಅರ್ಧ ಗಂಟೆ ಗಿಡಗಳ ಜತೆ ಮಾತುಕತೆ. ಹೊಸ ಹೂವೊಂದು ಅರಳಿದಾಗ ಮನಸ್ಸು ಪ್ರಫುಲ್ಲವಾಗುತ್ತದೆ. ಕೆಲವೊಮ್ಮೆ ನಾನು ಚಿಕ್ಕವಳಿದ್ದಾಗ ನಮ್ಮ ಮನೆಯಲ್ಲಿದ್ದ ಡೇರೆ, ದಾಸವಾಳ, ಗುಲಾಬಿಯ ಗಿಡಕ್ಕಾಗಿ ಹುಡುಕಾಡುತ್ತೇನೆ. ಮನೆಯ ಹಿಂದೆ ಇದ್ದ ಕಂಟ್ರಿ ಗುಲಾಬಿ ಗಿಡ ಮರದಂತೆ ಬೆಳೆದು ಬುಟ್ಟಿ ತುಂಬಾ ಹೂ ಕುಯ್ದರೂ ಇನ್ನೂ ಗಿಡದ ತುಂಬಾ ಹೂವಿರುತ್ತಿತ್ತು. ಪಕ್ಕದಲ್ಲಿ ಇದ್ದ ದಾಸವಾಳದ ಮರ ಗಂಧದ ಬಣ್ಣದ ಹೂ ಬಿಡುತ್ತಿತ್ತು. ಒಂದೇ ಹೂವಿನಲ್ಲಿ ಬೀಟ್ರೂಟ್ ಬಣ್ಣ ಮತ್ತು ಬಿಳಿ ಬಣ್ಣದ ದಳಗಳಿಂದ ಕೂಡಿದ ಡೇರೆ ಹೂವು ಬಿಡುವ ಗಿಡವಿತ್ತು. ಇವು ಯಾವುವೂ ಈಗ ನನಗೆ ಯಾವ ನರ್ಸರಿಗಳಲ್ಲೂ ಸಿಗುವುದಿಲ್ಲ. ಯಾವ ನರ್ಸರಿಗೆ ಹೋದರೂ ನನ್ನ ಪ್ರಜ್ಞೆಯಲ್ಲಿ ನೆನಪಿನಲ್ಲಿ ದಾಖಲಾಗಿರುವ ಗಿಡಗಳನ್ನು ಹುಡುಕುತ್ತೇನೆ.

ಚಿಕ್ಕ ಹುಡುಗಿ ಆದಾಗಿನಿಂದಲೂ ನನಗೆ ಈ ಗಿಡ ನೆಡುವ, ಕೈತೋಟ ಮಾಡುವ ಆಸೆ ಒಂದು ರೀತಿಯ ಗೀಳು ಅನ್ನುವಂತೆ ಇತ್ತು. ಆಗ ನಮ್ಮ ಮಲೆನಾಡಿನ ಮನೆಗಳಲ್ಲಿ ಮನೆಗೆ ಸಮೀಪದಲ್ಲಿ ಬಾಳೆ ಗಿಡಗಳನ್ನು ನೆಟ್ಟಿರುವ ಕಿರು ತೋಟಗಳಿರುತ್ತಿದ್ದವು. ಯಾವ ಗಳಿಗೆಯಲ್ಲಿ ಬೇಕಾದರೂ ಬಾಳೆ ಎಲೆ ಸುಲಭದಲ್ಲಿ ತರಬಹುದು ಎಂಬ ಉದ್ದೇಶ. ನಮ್ಮ ಮನೆಯಲ್ಲಿ ಕೊಟ್ಟಿಗೆ ಪಕ್ಕದಲ್ಲಿ ಇದ್ದ ಚಿಕ್ಕ ಬಾಳೆ ತೋಟವನ್ನು 'ಬಾಳೆಗೂಡು' ಎಂದು ಕರೆಯುತ್ತಿದ್ದರು. ಅಲ್ಲಿ ಏಳೆಂಟು ಬಾಳೆಮರಗಳು, ಒಂದೆರಡು ನಿಂಬೆ, ಕರಿಬೇವಿನ ಗಿಡಗಳು, ಒಂದು ಸಪೋಟ, ಒಂದು ಹಲಸಿನ ಮರ ಇದ್ದವು. ಮಧ್ಯ ಇವೆಲ್ಲಕ್ಕೆ ಕಳಸವಿತ್ತ ಹಾಗೆ ಮತ್ತಿ ಮರ ಇತ್ತು. ತಲೆಗೆ ಸ್ನಾನ ಮಾಡುವ ದಿನ ಈ ಮತ್ತಿ ಸೊಪ್ಪಿನ ರಸ ಕಿವುಚಿ ಸೀಗೆಪುಡಿ ಜತೆ ಬೆರೆಸಿ ಹಚ್ಚಿಕೊಳ್ಳುವ ರೂಢಿ ಇತ್ತು. ಹೀಗೆ ಮಾಡಿದರೆ ಕೂದಲು ಉದುರುತ್ತಿರಲಿಲ್ಲ. ನಮ್ಮ ಮನೆಯ ಸಮೀಪದ ಈಶ್ವರ ದೇವಾಲಯದ ಅರ್ಚಕರು ಬೇಸಿಗೆ ಕಾಲದಲ್ಲಿ ಈ ಮತ್ತಿ ಸೊಪ್ಪು ತೆಗೆದುಕೊಂಡು ಹೋಗಲು ಬರುತ್ತಿದ್ದರು. ಅವರು ನಮ್ಮ ಮೇಷ್ಟ್ರು ಆಗಿದ್ದರು. ಈ ಬಾಳೆ ಗೂಡಿನಲ್ಲಿ ಒಂದೆರಡು ರಸಬಾಳೆ ಗಿಡಗಳು ಇದ್ದು, ಅದರ ಬುಡಕ್ಕೆ ಅಜ್ಜ ಬಚ್ಚಲೊಲೆಯ ಬೂದಿ ಹಾಕುತ್ತಿದ್ದರು. ಇಷ್ಟೇ ಚಿಕ್ಕ ಬಾಳೆಗೂಡು ನನ್ನ ಇಷ್ಟದ ಜಾಗವಾಗಿತ್ತು.

ಅಜ್ಜಿಯ ಮನೆಯಲ್ಲೂ ಬಚ್ಚಲು ಮನೆ ಪಕ್ಕದಲ್ಲಿ ಪುಟ್ಟ ಬಾಳೆ ತೋಟ ಇತ್ತು. ಅಡಿಕೆ ತೋಟ ಮನೆಯಿಂದ ದೂರ ಇರುತ್ತಿದ್ದುದು ಈ ಬಾಳೆಗೂಡು ಮನೆಯ ಹತ್ತಿರ ಇದ್ದು ಸಮಯಕ್ಕೆ ಒದಗುತ್ತಿತ್ತು. ಇಲ್ಲಿಯೇ ಮಳೆಗಾಲದಲ್ಲಿ ಕೆಸುವನ್ನು ನೆಟ್ಟು ಬೆಳೆಸಿ, ಚಳಿಗಾಲದಲ್ಲಿ ಆ ಕೆಸುವಿನ ಗೆಡ್ಡೆಗಳನ್ನು ಕಿತ್ತು ಇಡುತ್ತಿದ್ದರು. ಸೊಪ್ಪು ಮಳೆಗಾಲದ ಸಮಯದಲ್ಲಿ ಅಡಿಗೆಗೆ ಒದಗುತ್ತಿತ್ತು. ಒಮ್ಮೆ ಬಾಳೆಗೂಡಿನ ಗೆಣಸಿನ ಬಳ್ಳಿ ಬೇಲಿಯಿಂದ ಹೊರಚಾಚಿ ಗೊಬ್ಬರ ಗುಂಡಿಯ ಕಡೆಗೆ ಹಬ್ಬಿತ್ತು. ನಾನು ಅಲ್ಲಿ ಒಂದೆರಡು ಕೋಲು ಅಡ್ಡ ಇಟ್ಟು, ಅದು ನನ್ನ ಗೆಣಸಿನ ತೋಟ ಎಂದು ಘೋಷಿಸಿದೆ. ದಸರೆ ರಜೆಯಲ್ಲಿ ಬಂದ ಕಸಿನ್‌ಗೆ ನನ್ನ ಗೆಣಸಿನ ತೋಟ ತೋರಿಸಲು ಕರೆದುಕೊಂಡು ಹೋದೆ. ಅಲ್ಲಿ ಹಸಿರು ಹುಲ್ಲು ಬೆಳೆದಿತ್ತು. ಗೆಣಸಿನ ಬಳ್ಳಿ ಇದ್ದ ಕುರುಹೂ ಇರಲಿಲ್ಲ. ದನ ಅಥವಾ ಯಾವುದೋ ಎಮ್ಮೆ ತಿಂದು ಹಾಕಿದ್ದವು. ನನ್ನ ಕಲ್ಪನೆಯಲ್ಲಿ ಮಾತ್ರ ಅಲ್ಲಿ ಗೆಣಸಿನ ತೋಟವಿತ್ತು. ಆಮೇಲೆ ಇಂತಹ ಎಷ್ಟೋ ಮೂರ್ಖ ಕನಸುಗಳು ಆದವು.

ನಮ್ಮ ಮನೆ ಇರುವ ಸೈಟ್ ದೊಡ್ಡದಾದರೂ, ಹಿಂಭಾಗದ ಔಟ್ ಹೌಸ್ ಸಾಕಷ್ಟು ಜಾಗ ಆಕ್ರಮಿಸಿದೆ. ಮನೆಯ ಎದುರು ಮತ್ತು ಎರಡೂ ಪಕ್ಕದಲ್ಲಿರುವ ಜಾಗದಲ್ಲಿ ಎರಡು ಸೀಬೆ ಮರ, ಎರಡು ಅಶೋಕ ಹೂಮರಗಳು, ನನಗೆ ಬೇಕಾದ ಹೂಗಿಡಗಳು ಒಂದು ಚಿಕ್ಕ ಕೊಳ ಇವೆ. ಮಳೆ ಇಲ್ಲದ ದಿನಗಳಲ್ಲಿ ನನಗೆ ಸಮಯ ಕಳೆಯಲು ಈ ಅಂಗೈ ಅಗಲದ ಜಾಗ ಸಾಕು. ನನ್ನ ದಿನವನ್ನು ಸುಂದರಗೊಳಿಸುವ ತಾವರೆ ನೈದಿಲೆಗಳು, ಪರಿಮಳ ಬೀರುವ ಮ್ಯಾಗ್ನೋಲಿಯ ಹೂಗಳು ಅರಳಿದಾಗ ಬದುಕು ಸಾರ್ಥಕ ಅನಿಸುತ್ತದೆ. ಹಳೆಯ ಸಪೋಟ ಗಿಡದಲ್ಲಿ ಹಣ್ಣು ಬಿಡುವುದಿಲ್ಲ. ಕೊಂಬೆಗಳನ್ನು ಕಟ್ ಮಾಡಿದ್ದೇವೆ. ಆದರೆ ಅದರ ರೆಂಬೆಕೊಂಬೆಯ ತುಂಬಾ ಕಾಡಿನಿಂದ ತಂದು ಕಟ್ಟಿ